

ತಾಣದ ನಕ್ಷೆ



ರೆಸಾರ್ಟ್ ನೋಟ





ಬೆಟ್ಟದ ಮೇಲಕ್ಕೆ ತಲುಪುತ್ತಿದ್ದಂತೆ ಹುಲ್ಲುಗಳ ರಾಶಿಯೇ ಕಾಣಸಿಗುತ್ತದೆ. ಸದ್ದಿಲ್ಲದೇ ಬಟ್ಟೆಯೊಳಕ್ಕೆ ಸೇರಿಕೊಂಡು ರಕ್ತ ಹೀರುವ ಜಿಗಣೆಗಳ ಬಗ್ಗೆ ಎಚ್ಚರ ವಹಿಸಿ. ಮಳೆಗಾಲದಲ್ಲಿ ಮಳೆ, ಚಳಿಗಾಲದಲ್ಲಿ ಮಂಜು ಮುಸುಕಿದ ವಾತಾವರಣ ಇಲ್ಲಿಯದು. ಪ್ಲಾಸ್ಟಿಕ್ ವಸ್ತುಗಳನ್ನು ಬೆಟ್ಟದ ಮೇಲೆ ಕೊಂಡೊಯ್ಯುವುದಿದ್ದರೆ ಒಂದಿಷ್ಟು ಮೊತ್ತವನ್ನು 'ಸೇಫ್ಟಿ ಡೆಪಾಸಿಟ್' ಆಗಿ ಕೊಡಬೇಕಾಗುತ್ತದೆ. ವಾಪಸ್ ಬರುವಾಗಲೂ ಅದೇ ವಸ್ತುಗಳನ್ನು ಹಿಡಿದುಕೊಂಡು ಬರುವುದಿದ್ದರೆ ನಿಮ್ಮ ದುಡ್ಡು ವಾಪಸ್. ಇದೊಂದು ರೀತಿಯಲ್ಲಿ ಪ್ಲಾಸ್ಟಿಕ್ ನಿರ್ಬಂಧದ ಬುದ್ಧಿವಂತಿಕೆಯ ಕ್ರಮ. ಪ್ಲಾಸ್ಟಿಕ್‌ಮುಕ್ತ ಪ್ರವಾಸೋದ್ಯಮ ಎಲ್ಲ ಕಡೆಗಳಿಂದ ಜನರನ್ನು ಇಲ್ಲಿಗೆ ಆಕರ್ಷಿಸುತ್ತಿದೆ.

ಕೇರಳ ಸರಕಾರ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹೊಸ ಯೋಜನೆಗಳನ್ನು ಹಾಕಿಕೊಂಡಾಗ ರಾಣಿಪುರಂ ಸ್ವಲ್ಪಮಟ್ಟಿಗೆ ಅಭಿವೃದ್ಧಿಯಾಯಿತು. ಪ್ರವಾಸಿಗರಿಗೆ ಉತ್ತಮ ಸೌಕರ್ಯಗಳನ್ನು ಕಲ್ಪಿಸಿಕೊಡುವ ಹಲವಾರು ಯೋಜನೆಗಳಿದ್ದವು. ಆದರೆ ಅವುಗಳಲ್ಲಿ ಹೆಚ್ಚಿನವು ಕಾರ್ಯರೂಪಕ್ಕೆ ಬರಲಿಲ್ಲ. ಪ್ರವಾಸಿಗರಿಗಾಗಿ ಇಲ್ಲೊಂದು ರೆಸಾರ್ಟ್ ಇದೆ. ಅದು ಮಾತ್ರ ಇಲ್ಲಿರುವುದರಿಂದ ಪ್ರವಾಸಿಗರಿಗೆ ಯಾವುದೇ ಸೌಲಭ್ಯ ಇದೆಯೆಂದು ಹೇಳಲು ಸಾಧ್ಯವಿಲ್ಲ.

ಪನತ್ತಡಿಯಿಂದ ರಾಣಿಪುರಂ ಹೋಗುವ ಡಾಂಬರು ರಸ್ತೆ ಏಕಾಏಕಿ ಒಂದುಕಡೆ ನಿಂತುಬಿಡುತ್ತದೆ. ಅಲ್ಲಿ ಯಾವುದೇ ಸೂಚನಾ ಫಲಕಗಳೂ ಇಲ್ಲ. ಅರ್ಧಂಬರ್ಧ ಬೆಳೆದ ಕುರುಚಲು ಲಂಟಾನಾ ಕಾಡುಗಳೆಡೆಯಿಂದ ಇಲಿಗಳು, ಹೆಗ್ಗಣಗಳು ಓಡಾಡುತ್ತಿರುತ್ತಿವೆ. ಈ ಭಾಗದಿಂದ ಬೆಟ್ಟವನ್ನು ಪ್ರವೇಶಿಸಿದ ಪ್ರವಾಸಿಗರು ದಾರಿ ತಪ್ಪಿ ಕಾಡಿನಲ್ಲಿ ಎಲ್ಲೆಲ್ಲೋ ಹೋದ ಉದಾಹರಣೆಗಳಿವೆ.

ಈ ಕೊರತೆಗಳ ನಡುವೆಯೂ ರಾಣಿಪುರಂ ಹಿಲ್‌ಸ್ಟೇಷನ್ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಇಲ್ಲಿನ ತಂಪು ವಾತಾವರಣ. ಬೆಟ್ಟದ ಮೇಲೆ ಕೈಚಾಚಿದರೆ ಮೋಡಗಳು ಕೈಗೆ ಸಿಗುತ್ತವೇನೋ ಅನ್ನಿಸುವಂಥ ಮೋಡಿ.